



ರಾಮಣ್ಣ: ಏನ್ರೀ ಮೇಷ್ಟ್ರೇ ನನ್ನ ಮಗ ಬರೆದ ಸರಿ ಉತ್ತರಕ್ಕೆ ತಪ್ಪು ಗುರುತು ಹಾಕಿದ್ದೀರಲ್ಲ?

ಮೇಷ್ಟ್ರು: ಸಾರ್ ಅವನು ಅಮೆರಿಕ ಖಂಡವನ್ನು ಕಂಡು ಹಿಡಿದದ್ದು ಯಾರು? ಎಂಬ ಪ್ರಶ್ನೆಗೆ ನಾನಲ್ಲ ಎಂದು ಉತ್ತರಿಸಿದ್ದಾನೆ.

ರಾಮಣ್ಣ: ಉತ್ತರ ಸರಿ ಅಲ್ಲವೇ? ಮಾರ್ಕು ಕೊಟ್ಟು ಬಿಡಿ.

★★★

ರಂಗ: ಓ ದೇವರೆ ನನಗೆ ಒಂದು ಕೋಣೆಯ ತುಂಬಾ ಚಿನ್ನ ಕೊಡು.

ಮಂಜ: ದೇವರೆ ನನಗೆ ಕೋಣೆಯ ತುಂಬಾ ವಜ್ರಕೊಡು.

ಗುಂಡ: ದೇವರೆ ನನಗೆ ಆ ಎರಡು ಕೋಣೆಯ ಕೀ ಕೊಡು.

★★★

ಪೇಟೆಯ ಶೌಚಾಲಯಕ್ಕೆ ಹೋಗಿದ್ದ ಪೋಂಕ ಕೆಲಸ ಮುಗಿಸಿ 10 ರೂಪಾಯಿಯ ನಾಣ್ಯವನ್ನು ಕೊಟ್ಟಾಗ ಕೌಂಟರಿನ ವ್ಯವಸ್ಥಾಪಕ ಹೇಳಿದ: ರೀ ಚಿಲ್ಲರೆ ಇಲ್ಲ, ಇನ್ನೊಮ್ಮೆ ಹೋಗಿ ಬನ್ನಿ.

★★★

ತಾಯಿ: ಪುಟ್ಟಾ ಎದ್ದೇಳು ಮಗಾ, ಕಾಲೇಜಿಗೆ ಲೇಟಾಗ್ತಿದೆ.

ಮಗ: ಅಮ್ಮ ಪ್ಲೀಸ್ ಇವತ್ತು ನಾನು ಕಾಲೇಜಿಗೆ ಹೋಗಲ್ಲ.

ತಾಯಿ: ಯಾಕೋ ಕಾಲೇಜಿಗೆ ಹೋಗಲ್ಲಾಂದ್ರೆ ಏನರ್ಥ? ಹೋಗಲಿ ಯಾಕೆ ಇಷ್ಟ ಇಲ್ಲ? ಎರಡು ಕಾರಣ ಕೊಡು.

ಮಗ: ನನ್ನನ್ನು ಮಕ್ಕಳೂ ಇಷ್ಟಪಡಲ್ಲ, ಅಧ್ಯಾಪಕರೂ ಇಷ್ಟಪಡಲ್ಲ. ಈಗ ನಾನ್ಯಾಕೆ ಹೋಗಬೇಕು? ನೀನು ಎರಡು ಕಾರಣ ಕೊಡು.

ತಾಯಿ: ಒಂದು ನಿನಗೆ 55 ವರ್ಷ. ಎರಡು– ನೀನು ಕಾಲೇಜ್ ಪ್ರಿನ್ಸಿಪಾಲ್. ನಿನ್ನ ಜವಾಬ್ದಾರಿಗಳನ್ನು ನೀನು ಅರ್ಥ ಮಾಡ್ಕೊಬೇಕು.

**(ಸಂಗ್ರಹ) ಸಾವಿತ್ರಮ್ಮ ಕೆ. ವಿಭೂತಿ, ಹರಿಹರ**




ತಂದೆ: ಲೋ ಮಗನೇ ಹೊಸಾ ಬೈಕ್ ತಗೊಂಡು ಹೋಗ್ತಾ ಇದೀಯಾ! ಹುಷಾರು ನಿಧಾನವಾಗಿ ಹೋಗು

ಮಗ: ಯಾಕಪ್ಪಾ?

ತಂದೆ: ಇಲ್ಲದಿದ್ದರೆ ನಿಧನವಾಗಿ ಹೋಗ್ತೀಯಾ

★★★

ಸುಮಾ: ಲೇ ಅವಳ ಮೈಬಣ್ಣ ನೋಡೇ! ಎಷ್ಟು ಕೆಂಪಗಿದೆ. ಅದೆಷ್ಟು ಸುಂದರವಾಗಿದ್ದಾಳೆ ಅಲ್ವಾ?

ರಾಣಿ: ಸಾಕು ಸುಮ್ಮನಿರೇ! ಅವಳು ಮಳೆಯಲ್ಲಿ ಸ್ವಲ್ಪ ನೆನೆಯಲಿ, ಆಗ ನಿನಗೆ ಅವಳ ಅಸಲಿ ಬಣ್ಣ ಗೊತ್ತಾಗುತ್ತದೆ!

ಅತಿಥಿ: ನಿಮ್ಮ ಮನೆ ಅಡುಗೆ ನಳ ಪಾಕ ಅದ್ಭುತ! ಅಡುಗೆ ಮಾಡಿದ ಕೈಗಳಿಗೆ ಚಿನ್ನದ ಬಳೆ ತೊಡಿಸಬೇಕು.

ಗೃಹಿಣಿ: ನಮ್ಮೆಜಮಾನರು ಬಳೆ ಹಾಕಿ ಕೊಳ್ಳುವುದಿಲ್ಲ.

★★★

ಗುಂಡ: ನನ್ನ ಹೆಂಡತಿಯ ತೂಕ ಹೆಚ್ಚಾಗಿರುವುದಕ್ಕೆ ಡಾಕ್ಟರು ನನಗೆ ಸಿಕ್ಕಾಪಟ್ಟೆ ಬೈದು ಬಿಟ್ಟರು.

ಗೆಳೆಯ: ಅಯ್ಯೋ ನಿನ್ನನ್ನು ಯಾಕೆ ಬೈದರು?

ಗುಂಡ: ಪ್ರತಿದಿನ ಮನೆಯಲ್ಲಿ ಅಡುಗೆ ಮಾಡಿ ಅವಳಿಗೆ ಊಟ ಹಾಕೋದು ನಾನೇ ತಾನೆ, ಅದಕ್ಕೆ!

★★★

ಗುಂಡ: ಡಾಕ್ಟ್ರೇ ನಿನ್ನೆ ನಾನು ಬಂದಾಗ ನೀವು ನನಗೆ ಒಂದು ಸಿಹಿ ಸುದ್ದಿ ಹೇಳ್ತೀನಿ ಅಂದಿದ್ರಿ... ಏನದು?

ವೈದ್ಯ: ಏನಿಲ್ಲ ನಿಮಗೆ ಮಧು ಮೇಹ ಇದೆ.

★★★

ಗೆಳೆಯ: ಯಾಕೋ ಇಷ್ಟು ಉಸಿರುಗಟ್ಟಿದ್ದೀಯಾ?

ಗುಂಡ: ನಾನು ನನ್ನ ಹೆಂಡತಿಯನ್ನು ಕಾರಿನಲ್ಲಿ ಕೂರಿಸಿಕೊಂಡು ಬಂದೆ.

ಗೆಳೆಯ: ಅದಕ್ಕಾಕೆ ಇಷ್ಟು ಜೋರಾಗಿ ಉಸಿರು ಬಿಡಬೇಕು?

ಗುಂಡ: ಕಾರನ್ನು ತಳ್ಳಿಕೊಂಡು ಬಂದೆ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

